
ಶ್ರೀಮತೆ ರಾಮಾನುಜಾ0ಯ ನಮಃ

ಶ್ರೀ ಗೋದಾದೇವಿ ಸಂಘದ ಕಲಾವಿದರು ಅರ್ಪಿಸುವ

# ಸಮಾಜ ಸುಧಾರಕ ಸ್ವಾಮಿ ರಾಮಾನುಜ






ಲೇಖಕಿಯರು

ತಮಿಳು ಮೂಲ
ಶ್ರೀಮತಿ ಶಕುಂತಲ ಐಯ್ಯಂಗಾರ್

ಕನ್ನಡ ಅನುವಾದ
ಶ್ರೀಮತಿ ಮಾಲತಿ ಶಿಂಗ್ಲಾಚಾರ್




ಪ್ರಕಾಶನ

ಕಲಾ ಪ್ರೇಮಿ ಫೌಂಡೇಷನ್ ಮತ್ತು

ಪಾಲ್ಹಳ್ಳಿ ನಾರಾಯಣ ಐಯ್ಯಂಗಾರ್ ಚಾರಿಟೀಸ್

# Palalli M.A. Narayana Iyengar Charities

नास्ति विद्यासमं चक्षुः



ವಿದ್ಯೆಗೆ ಸಮನಾದ

ಕಣ್ಣು ಮತ್ತೊಂದಿಲ್ಲ

A registered Charitable Trust devoted to promoting education and culture

The Trust gives scholarships, has instituted Merit Awards and publishes works that reflect our rich cultural & spiritual heritage.

Our publications

English translations of Tirupallandu, Tiruppavai and Gadyatrayam
108 Divyadeshams and audio CD of Gadyatrayam

**Donations to the Trust are exempted from Income Tax Under Section 80G (5) (vi) of the Income Tax Act**

213, 1st floor, 4th Main, 18th cross,
Malleswaram, Bangalore–560 055

Cell: 9448484403; 9886555234; 9448833352

Email: man.prasad@gmail.com palahallirani@yahoo.com

# The Kalapremi Foundation
# & Palalli Narayana Iyengar Charities

Presents

## Samaja Sudharaka Swami Ramanuja

Ramanuja - The Social Reformer
An audio visual presentation along with music, dance and narration of incidents from the life of Swami Ramanuja that highlight his role as a social reformer and his social concern and humanitarian values

by

**Sri Godhadevi Sangam**

In the divine presence of

**H H Sri Sri Yadugiri Yathiraja Narayana Ramanuja Jeeyar Swami (Tiru Swami)**

At 6.30 p.m., on Saturday 3rd February 2018, at

**The Seva Sadan Auditorium**

14th Cross, opp. MLA College, Malleswaram,
Bangalore - 560 003

ಶ್ರೀಮತೆ ರಾಮಾನುಜಾಯ ನಮಃ

# ಸಮಾಜ ಸುಧಾರಕ ಸ್ವಾಮಿ ರಾಮಾನುಜ

ಸ್ವಾಮಿ ರಾಮಾನುಜರ ಜೀವನದ ಸನ್ನಿವೇಶಗಳ ಮೂಲಕ
ಅವರ ಸಾಮಾಜಿಕ ಕಳಿಕಳಿ ಮತ್ತು ಮಾನವೀಯ
ಮೌಲ್ಯಗಳನ್ನು ದೃಷ್ಯ, ಸಂಗೀತ, ನೃತ್ಯ ಮತ್ತು ಉಪನ್ಯಾಸದ
ಮೂಲಕ ನಮಗೆ ತಿಳಿಸುತ್ತಾರೆ

## ಶ್ರೀ ಗೋದಾದೇವಿ ಸಂಘದ ಕಲಾವಿದರು

ಲೇಖಕಿಯರು

ತಮಿಳು ಮೂಲ ಶ್ರೀಮತಿ ಶಕುಂತಲ ಐಯ್ಯಂಗಾರ್

ಕನ್ನಡ ಅನುವಾದ ಶ್ರೀಮತಿ ಮಾಲತಿ ಶಿಂಗ್ಲಾಚಾರ್

ಮೊದಲ ಮುದ್ರಣ: 500 ಪ್ರತಿಗಳು

ಪುಟಗಳು: 12 + 4

ಬೆಲೆ: ಉಚಿತ ವಿತರಣೆಗೆ

ಕಲಾ ಪ್ರೇಮಿ ಫೌಂಡೇಷನ್

213, 4 ನೇ ಮೈನ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 055

ಮತ್ತು

ಪಾಲ್ಘಳ್ಳಿ ನಾರಾಯಣ ಐಯ್ಯಂಗಾರ್ ಚಾರಿಟೀಸ್

ಜಿ 004, ಬ್ಲಾಕ್ 1, ಆರ್.ಎಂ.ವಿ ಕ್ಲಸ್ಟರ್ಸ್, ಫೇಸ್ 2, ಲೊಟ್ಟೆಗೊಲ್ಲನಹಳ್ಳಿ,

ಬೆಂಗಳೂರು 560 094

ಅಖಿಲಹೇಯ ಪ್ರತ್ಯನೀಕತಾನನಾದ, ಸಕಲ ಸದ್ಗುಣ ಸಂಪನ್ನನಾದ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ಹಾಡಿ ಹೊಗಳಲು 12 ಜನ ಆಳ್ವಾರರು ನಮ್ಮ ಈ ಪುಣ್ಯ ಭೂಮಿಯಲ್ಲಿ ಅವತರಿಸಿದರು.

ಭಕ್ತಿಯೂ, ಜ್ಞಾನವೂ ಕೂಡಿ ಪಾಶುರಗಳಾಗಿ ವರ್ಷಿಸಿದವು. ಅವುಗಳೇ ನಾಲಾಯಿರ ದಿವ್ಯಪ್ರಬಂಧಗಳೆಂಬ ತಮಿಳು ಪಾಶುರಗಳು. ಈ ಪಾಶುರಗಳು ಶ್ರೀ ನಾಥಮುನಿಗಳಿಂದ ಕಂಡು ಹಿಡಿಯಲ್ಪಟ್ಟು, ಶ್ರೀ ಆಳವಂದಾರ್ ಅಂದರೆ ಶ್ರೀ ಯಾಮುನಾಚಾರ್ಯರ ಮುಖೇನ ನಮ್ಮಂತಹ ಸಾಮಾನ್ಯರಿಗೂ ತಲುಪುವಂತೆ ಮಾಡಿ, ನಮ್ಮನ್ನು ಉದ್ಧಾರ ಮಾಡಿದ ಕೀರ್ತಿ ಶ್ರೀ ನಾಥಮುನಿಗಳಿಗೇ ಸೇರುವುದು.

ಆಳ್ವಾರರುಗಳು ಕರುಣಿಸಿದ ಈ ಪಾಶುರಗಳನ್ನು, ಶ್ರೀ ರಾಮಾನುಜರು ಬಹಳ ಆಸಕ್ತಿಯಿಂದ ಕಲಿತು ಕರಗತ ಮಾಡಿಕೊಂಡರು.

ಆ ಪಾಶುರಗಳಲ್ಲಿ ಅವರನ್ನು, ಅತಿಯಾಗಿ ಆಕರ್ಷಿಸಿದ ಪಾಶುರವೆಂದರೆ, ತೊಂಡರಡಿಪ್ಪೊಡಿಯಾಳ್ವಾರ್ ಅಂದರೆ ವಿಪ್ರನಾರಾಯಣರು ರಚಿಸಿದ "ತಿರುಮಾಲೈ" ಯಲ್ಲಿನ 42ನೇ ಪಾಶುರ. ಅದಾವುದೆಂದರೆ; "ಪಳುದಿಲಾ ಒಳುಕಲಾಟ್ರು ಪಲ ಚತುರ್ವೇದಿ ಮಾರ್ಗಳ್ ಇಳಿ ಕುಲತ್ತವರ್ಕಳೇಲುಂ ಎಂ ಅಡಿಂಯಾರ್‌ಕಳಾಹಿಲ್। ತೊಳುಮಿನೀರ್. ಕೊಡುಮಿನ್, ಕೊಣ್ಮಿನೆನ್ರು ನಿನ್ನೊಡುಮೊಕ್ಕ। ವಳಿಪಡ ಅರುಳಿನಾಯ್ ಪೋಲ್ ಮದಿಳ್ ತಿರುವರಂಗ ತ್ತಾನೇ" ಎಂಬ ಪಾಶುರ. ಇದರ ಅರ್ಥ ಹೀಗಿದೆ.

"4 ವೇದಗಳನ್ನು, ನೀವು ಬಹು ಚೆನ್ನಾಗಿ ಅಭ್ಯಸಿಸಿ ಪ್ರಬುದ್ಧರಾಗಿರಬಹುದು. ಕೀಳುವರ್ಗದವರಾಗಿದ್ದೂ ನನ್ನಲ್ಲಿ ಪರಮ ಭಕ್ತಿಯುಳ್ಳವರಾಗಿಯೂ, ಎಂದೆಂದಿಗೂ ನನ್ನನ್ನು ಭಕ್ತಿಯಿಂದ ಪೂಜಿಸಿ, ನನ್ನ ಪ್ರೀತ್ಯಾನುಗ್ರಹವನ್ನು ಬೇಡಿ ಬಂದವರು. ತೊಳುಮಿನ್ ಕೊಡುಮಿನ್ ಅಂದರೆ ನಿಮ್ಮಲ್ಲಿರುವ ಜ್ಞಾನವನ್ನು ಅವರಿಗೆ ಹಂಚಿ, ಕೊಳ್ಳಿನ್ ಎಂದರೆ ಅವರಲ್ಲಿರುವ ಒಳ್ಳೆಯ ಗುಣಗಳನ್ನು ನೀವು ಪಡೆಯಿರಿ ಎಂಬುದನ್ನು ನಮಗೆ ಹೇಳಲು ಬಂದಿರುವೆಯಾ ರಂಗನಾಥಾ "ಎಂದು ಆಳ್ವಾರರು ಶ್ರೀ ರಂಗನಾಥನನ್ನು ಕೇಳುವರು".

ಈ ಪಾಶುರ ಶ್ರೀ ರಾಮಾನುಜರಿಗೆ ಬಹು ಪ್ರಿಯವಾಯಿತು. "ಆ ಪರಮಾತ್ಮ ರಂಗನಾಥನನ್ನು ಭಜಿಸುವ ಎಲ್ಲ ವರ್ಗದವರೂ ಒಂದೇ ಕುಲ" ಎಂಬುದು ಅಂದೇ ಅವರಿಗೆ ಗೋಚರಿಸಿತು.

ಆದರೇನು ಮಾಡುವುದು? ಅವರು ವಾಸಿಸುತ್ತಿದ್ದ ಕಾಲದಲ್ಲಿ ಮೇಲುಜಾತಿ, ಕೀಳುಜಾತಿ ಎಂಬ ಭೇದಭಾವವಿದ್ದಿತು. ಯಾರ ಮನಸ್ಸಿಗೂ ನೋವುಂಟು ಮಾಡದೆ ಈ ಕೀಳುಭಾವನೆಯನ್ನು, ಬೇರು ಸಹಿತ ಕಿತ್ತೊಗೆಯಬೇಕೆಂದು ಮನದಲ್ಲಿ ಧೃಢ ನಿಶ್ಚಯವಮಾಡಿದರು. ಆ ಸಮುದಾಯವನ್ನೂ, ಅಲ್ಲಿಯ ಜನರ

ಭಾವನೆಗಳನ್ನೂ, ಹೋಗಲಾಡಿಸಿ ಸುಸಂಸ್ಕೃತ ಸಮಾಜಕ್ಕೆ ಅಡಿಪಾಯ ಹಾಕಿದರು.

ಆದ್ದರಿಂದ ನಮ್ಮ ಕಾರ್ಯಕ್ರಮದಲ್ಲಿ ಶ್ರೀ ರಾಮಾನುಜರು ಸಮಾಜವಾದಿ ಕಾರ್ಯಗಳಾದ ಸಮಾಜದ ದೋಷಗಳನ್ನು ಬದಲಿಸದೆಯೇ ಆಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ತರಬೇಕೆಂಬುದೇ ಅವರ ಗುರಿಯಾಯಿತು. ತೊಂಡನೂರು ಕೆರೆ ಸ್ಥಾಪಿಸಿದುದೂ, ದಾರಿಹೋಕರ ತಲೆಯ ಮೇಲೆ ಹೊರುವ ಭಾರವನ್ನು ಇಳಿಸಿ ಆಯಾಸ ಪರಿಹರಿಸಿ ಕೊಳ್ಳಲು ಅಲ್ಲಲ್ಲೇ ಮೋಟುಗೋಡೆಗಳ ನಿರ್ಮಾಣ, ಇತ್ಯಾದಿ ಸುಧಾರಣೆಗಳನ್ನು ಕಾಣಲಿದ್ದೀರಿ. ಶ್ರೀ ರಾಮಾನುಜರ ಸಾಂಸಾರಿಕ ಜೀವನದ ಘಟನೆಗಳನ್ನು ಬಿಟ್ಟು, ಅವರ ಸಮಾಜ ಸುಧಾರಣೆಯ ವಿಷಯವನ್ನು ಮಾತ್ರ ಪ್ರತಿಪಾದಿಸಲಿದ್ದೇವೆ. ಯಾವ ಕುಲವೇ ಆಗಿರಲಿ ಯಾವ ಜಾತಿಯೇ ಆಗಿರಲಿ ಅದನ್ನು ಲಕ್ಷಿಸದೆ ಭಗವಂತನ ಮೇಲಿನ ಭಕ್ತಿಯನ್ನೂ, ಗುಣವನ್ನೂ, ಕಂಡು ಅವರನ್ನು ಗೌರವಿಸಬೇಕು ಎಂಬುದೇ ರಾಮಾನುಜರ ಧ್ಯೇಯ. ಕಾಡಿನ ದಾರಿಯಲ್ಲಿ ಇವರುಗಳನ್ನು ಕಳ್ಳರಿಂದ ಕಾಪಾಡಿದ ಜನರನ್ನು ತಿರುಕ್ಕುಲತ್ತಾರ್ ಎಂದು ಅವರ ಗುಣವನ್ನು ಕಂಡು ಹೇಳಿದರು. ಒಬ್ಬ ಮುಸಲ್ಮಾನ ಹುಡುಗಿಯನ್ನು ಬೀಬೀ ನಾಯ್ಚಿಯಾರೆಂದು ಹೇಳಿ ಉನ್ನತ ಸ್ಥಾನ ಕೊಟ್ಟರು. ಏಕೆಂದರೆ ಅವಳಿಗೆ ಇರುವ ಕೃಷ್ಣನ ಮೇಲಿನ ಅಪಾರ ಪ್ರೇಮವನ್ನು ಕಂಡು. ಶ್ರೀ ವೈಷ್ಣವ ಸಿದ್ಧಾಂತವನ್ನು ಅನುಸರಿಸಿದರು. ನಾನು ಎಂಬ ಅಹಂಕಾರವನ್ನು ತ್ಯಜಿಸುವುದು. ಮಿಕ್ಕೆಲ್ಲ ಜೀವರಾಶಿಗಳಲ್ಲೂ ಮಮತೆ ತೋರುವುದು. "ತಾನೇ ತಾನಾಯಿದುಹ" ಎಂಬ ಆಂಡಾಳಳ ನುಡಿಯಂತೆ ಬೇರೆಯವರು ತಪ್ಪುಮಾಡಿ ತಮ್ಮ ಮೇಲೆ ಬಂದಾಗಲೂ ಪರವಾಗಿಲ್ಲವೆಂದು ಒಪ್ಪಿಕೊಳ್ಳುವ ಶ್ರೀ ವೈಷ್ಣವ ದೀಕ್ಷೆ. ಸತ್ಯವೇ ಧರ್ಮವೆಂದು ಬಾಳುವುದು. ಫಲಾಪೇಕ್ಷೆಯಿಲ್ಲದೆ ಪರಮಾತ್ಮನಿಗೆ ಕೈಂಕರ್ಯಮಾಡುವುದು ಎಂದೆಲ್ಲ ತತ್ವಗಳನ್ನು ನಮಗೆ ತೋರಿಸಿಕೊಟ್ಟ ಮಹಾತ್ಮರು. ನಾವು ಅವರ ಮಾರ್ಗವನ್ನು ಅನುಸರಿಸಿ, ಹಾಗೆಯೇ ಬಾಳೋಣ.

## "ಶ್ರೀ ರಾಮಾನುಜರೂ ತಿರುಕ್ಕಚ್ಚಿನಂಬಿಗಳೂ"ಶ್ರೀ 2ನೇ ತಿರುವಂದಾದಿಯ 96ನೇ ಪಾಶುರ

"ಅತ್ತಿ ಊರಾನ್ ಪುಳ್ಳೈ ಊರ್ವಾನ್ ಅಣಿಮಣಿಯಿನ್
ತುತ್ತಿಶೇರ್ ನಾಗತ್ತಿನ್‌ಮೇಲ್ ತುಯಿಲ್ವಾನ್
ಮುತ್ತಿ ಮಳೈಯಾವಾನ್ ಮಾಕಡಲ್ ನಂಜುಂಡಾನ್
ತನಕ್ಕುಂ ಇಱೈಯಾವಾನ್ ಎಂಗಳ್‌ಪಿರಾನ್"

ಎಂಬ ಪಾಶುರದಲ್ಲಿ ಹೀಗಿದೆ ಅರ್ಥ

ಈ ಪಾಶುರವನ್ನು ತಿರುಕ್ಕಚ್ಚಿ ನಂಬಿಗಳು ವರದನಿಗೆ ಬೀಸಣಿಗೆ ಸೇವೆ ಮಾಡುವಾಗ ಅತ್ಯಂತ ಪ್ರೀತಿಯಿಂದ ಹಾಡುವ ಪಾಶುರಗಳಲ್ಲಿ ಒಂದು. "ಅತ್ತಿಯೂರ್ ಎಂಬ ತಿರುಕ್ಕಚ್ಚಿಯಲ್ಲಿ ನೆಲೆಸಿರುವವನೇ, ಗರುಡರಾಜನ ಮೇಲೇರಿ ಬರುವವನೇ, ವಜ್ರ ಮಾಣಿಕ್ಯದಿಂದೊಡಗೂಡಿದ ಆಭರಣಗಳನ್ನು ಧರಿಸಿ ನಾಗರಾಜನ ಮೇಲೆ ಶಯನಿಸಿರುವವನೇ, ಗೃಹಸ್ಪತಿಯಂ, ಆವಾಹನೀಯಂ. ದಾಕ್ಷಿಣಾಗ್ನಿ ಎಂಬ 3 ವಿಧ ಅಗ್ನಿ ರಾಜನಿಂದ ಸ್ತುತಿಸಲ್ಪಡುವವನೇ, ವೇದರಾಜನೇ. ಕ್ಷೀರಸಾಗರ ಮಥನ ಸಮಯದಲ್ಲಿ ಹೊರಬಂದ ವಿಷವನ್ನು ಉಂಡ ಈಶ್ವರನ ಕಂಠವನ್ನೇನೋ ತಡೆಹಿಡಿದು ನಿಲ್ಲಿಸಿದಳು ಪಾರ್ವತಿ. ಮಿಕ್ಕ ವಿಷವನ್ನೆಲ್ಲಾ ನೀನು ಉಂಡು ನಿನ್ನ ಮೈ ಬಣ್ಣ ಕರು ನೀಲವರ್ಣನಾದೆಯಲ್ಲಾ ಸ್ವಾಮಿ. ಈಶ್ವರ ನೀಲಕಂಠನಾದ, ನೀನಾದರೋ ನೀಲ ಮೇಘವರ್ಣನಾಗಿ ಬಿಟ್ಟೆ, ಆ ಈಶ್ವರನಿಗೂ ನಾಯಕನಾದೆಯಲ್ಲ ಸ್ವಾಮಿ" ಎಂದು ಕೊಂಡಾಡುವರು.

"ಹಿಂದಿನ ಘಟನೆಯಿಂದ ಬಹು ನೊಂದ ರಾಮಾನುಜರು ಈ ವರ್ಣಭೇದದ ಸ್ಥಿತಿಯನ್ನು ಬದಲಾಯಿಸಲು ತಾನೇ ಏನಾದರೂ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿದರು.

"ಯಥಾ ಗುರು ತಥಾ ಶಿಷ್ಯ" ಎಂಬ ನಾಣ್ಣುಡಿಯಂತೆ ಗುರುವಿನ ಮಾರ್ಗವನ್ನು ಅನುಸರಿಸಬೇಕೆಂದುಕೊಂಡರು.

"ಶ್ರೀ ಆಳವಂದಾರರು ಬ್ರಾಹ್ಮಣನಲ್ಲದ ಮಾರನೇರ್ ನಂಬಿಯವರ ಉದಾತ್ತ ಗುಣವನ್ನು ಕಂಡು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಮಾರನೇರರ ಅಂತ್ಯಕಾಲದ ಶ್ರಾದ್ಧ ಕರ್ಮಾದಿಗಳನ್ನು ತಮ್ಮ ಶಿಷ್ಯರಾದ ಪೆರಿಯನಂಬಿಯವರು ನಡೆಸುವಂತೆ ಆಜ್ಞೆಮಾಡಿದರು.ಆಳವಂದಾರರ ಜಾತಿಭೇದವಿಲ್ಲದ ಗುಣವನ್ನು ಕಂಡು ತಾವೂ ಆ ಮಾರ್ಗದಲ್ಲಿಯೇ ವ್ಯವಹರಿಸಬೇಕೆಂದು ನಿಶ್ಚಯಿಸಿದರು ರಾಮಾನುಜರು.

"ಮೊದಲನೆಯದಾಗಿ :– ಶ್ರೀ ವರದರಾಜನಿಗೆ ಪುಷ್ಪ ಕೈಂಕರ್ಯ, ಚಾಮರ ಕೈಂಕರ್ಯವನ್ನು ನೆರವೇರಿಸುತ್ತಿರುವ, ವೈಶ್ಯಕುಲದವರಾದ ತಿರುಕ್ಕಚ್ಚಿನಂಬಿಯವರನ್ನು ಆಶ್ರಯಿಸಲು ಮನಸ್ಸು ಪ್ರೇರೇಪಿಸಿತು. ನಂಬಿಗಳಲ್ಲಿ ಹೋಗಿ ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಕಾಡಿ ಬೇಡಿದರು. ಆದರೋ ವೈಶ್ಯ ಕುಲದವರಾದ ತಿರುಕ್ಕಚ್ಚಿನಂಬಿಗಳು ರಾಮಾನುಜರಿಗೆ ಗುರುವಾಗಲು ಒಪ್ಪಲಿಲ್ಲ, ನಿರಾಕರಿಸಿದರು.

ತಮ್ಮ ಸದ್ಗುಣಗಳಿಂದಲೇ ತಾವು ಬಹಳ ಉನ್ನತಸ್ಥಾನದಲ್ಲಿರುವಿರಲ್ಲವೇ ಆದ್ದರಿಂದಲೇ ಅಲ್ಲವೇ ತಾವು ಕಾಂಚೀಪೂರ್ಣರೆಂದು ಕರೆಸಿಕೊಳ್ಳುತ್ತಿರುವಿರಿ ಎಂದು ದುಂಬಾಲುಬಿದ್ದು ಅವರನ್ನು ಗುರುವಾಗಲು ಒಪ್ಪಿಸಿದರು. ನಂತರ ಅವರ ಶೇಷಪ್ರಸಾದದ ಆಹಾರವನ್ನೂ ತಾವು ಸ್ವೀಕರಿಸ ಬೇಕೆಂದು ರಾಮಾನುಜರು ನಂಬಿಗಳನ್ನು ತಮ್ಮ ಮನೆಗೆ ಭಿಕ್ಷೆಗೆ ಆಹ್ವಾನಿಸಿದರು. ರಾಮಾನುಜರ ಪತ್ನಿ

ಮಡಿವಂತಿಕೆಯ ಸಂಪ್ರದಾಯಸ್ಥರಲ್ಲಿ ಬೆಳೆದು ಬಂದವಳು. ತಮಗೆ ಆತಿಥ್ಯ ನೀಡಲು ಒಪ್ಪಲಾರಳು ಎಂಬ ಸೂಕ್ಷ್ಮವನ್ನರಿತ ನಂಬಿಗಳು. ರಾಮಾನುಜರು ಮನೆಯಲ್ಲಿಲ್ಲದ ಸಮಯ ನೋಡಿ, ಅವರ ಮನೆಗೆ ಬಂದು ಭಿಕ್ಷೆಯುಂಡು ಹಿಂದಿರುಗಿದರು.

"ಇತ್ತ ಮನೆಗೆ ಬಂದ ತಿರುಕ್ಕಚ್ಚಿನಂಬಿಯವರಿಗೆ ಊಟ ಬಡಿಸಿ, ಅವರು ಹೊರಟ ನಂತರ ಆ ಎಂಜಲೆಲೆಯನ್ನು ಕೋಲಿನ ಸಹಾಯದಿಂದ ಬಚ್ಚಲಿಗೆಳೆದು ಆ ಜಾಗವನ್ನು ಶುದ್ಧಿಮಾಡಿ ಪುನಃ ಹೊಸದಾಗಿ ಅಡಿಗೆ ಮಾಡಲು ಪ್ರಾರಂಭಿಸಿದಳು. ಗುರುಗಳ ಶೇಷ ಪ್ರಸಾದವನ್ನ ಸ್ವೀಕರಿಸಲು ಬಂದ ರಾಮಾನುಜರ ನಿರೀಕ್ಷೆ ಸುಳ್ಳಾಯಿತು.

ಶ್ರೀ ರಾಮಾನುಜರ ಉನ್ನತವಾದ ಗುಣ ಅವರ ಪತ್ನಿಗೆ ಇರಲಿಲ್ಲವಲ್ಲಾ!

## "ಮಲ್ಲ ಧನುರ್ದಾಸನ ಮನ: ಪರಿವರ್ತನೆ"

"ಶ್ರೀರಂಗ ನಗರದಲ್ಲಿ, ಮಲ್ಲ ಧನುರ್ದಾಸನೆಂಬ ಜಟ್ಟಿಯು, ತನ್ನ ಪತ್ನಿಯ ಸುಂದರವಾದ ಕಣ್ಣುಗಳಿಗೆ ಬಿಸಿಲು ತಾಕದಂತೆ, ಅವಳು ಹೋದಲೆಲ್ಲಾ ಅವಳಿಗೆ ಛತ್ರಿ ಹಿಡಿದುಕೊಂಡು ಕಾಪಾಡುತ್ತಿರುತ್ತಾನೆ. ದಾರಿಯ ಜನರೆಲ್ಲ ಈ ಘಟನೆಯನ್ನು ಕಂಡು ಹಾಸ್ಯಮಾಡುತ್ತಿರುವರು.

ಒಂದು ದಿನ ಈ ಘಟನೆಯನ್ನು ಕಂಡ ಶ್ರೀ ರಾಮಾನುಜರು ಮನನೊಂದು, ಆತನನ್ನು ಕರೆದು, "ಅಪ್ಪಾ ಈ ನಿನ್ನ ಪತ್ನಿಯ ಕಣ್ಣುಗಳಿಗಿಂತ ಸುಂದರವಾದ ಕಂಗಳನ್ನು ತೋರಿದರೆ ಒಪ್ಪುವೆಯಾ? ಎಂದರು.

ಅದಕ್ಕೆ ಜಟ್ಟಿ, ಸ್ವಾಮಿ ತಾವೇನು ಹೇಳುತ್ತಿರುವಿರಿ? ಇದರಂತೆ ಸುಂದರವಾದ ಕಂಗಳೇ? ಖಂಡಿತ ಇರಲು ಸಾಧ್ಯವಿಲ್ಲ. ಹಾಗೇನಾದರೂ ನೀವು ತೋರುವಿರಾದರೆ ನಾನು ಅಂದೇ ನಿಮಗೆ ದಾಸನಾಗುವೆ ಎಂದ.

ಆಗ ಶ್ರೀ ರಾಮಾನುಜರು, ಆ ದಂಪತಿಗಳನ್ನು ಶ್ರೀ ರಂಗನಾಥನ ಸನ್ನಿಧಿಗೆ ಕರೆದೊಯ್ದರು. ಆಹಾ! ಅದೇನಾಶ್ಚರ್ಯ! ಜಟ್ಟಿ ಸುಂದರವಾದ ಕಂಗಳನ್ನು ಕಂಡನೇ? ದಾಸನಾದನೇ. ತಾವೇ ಕಂಡು ಆನಂದಿಸಿ.

"ಶ್ರೀ ರಾಮಾನುಜರು ಧನುರ್ದಾಸನ ಗುಣಗಳಿಂದ ಸಂಪ್ರೀತರಾಗಿ ಅವನನ್ನು ತನ್ನ ಮುಖ್ಯ ಶಿಷ್ಯನನ್ನಾಗಿ ಮಾಡಿಕೊಂಡರು. ಹಿಂದಿನಿಂದ ಶಿಷ್ಯರಾಗಿದ್ದ ಜನರಿಗೆ ಇದನ್ನು ಕಂಡು ಸಹಿಸಲಾಗಲಿಲ್ಲ. ಹೇಗಾದರೂ ಮಾಡಿ ಇವನನ್ನು ತೊಂದರೆಗೀಡಾಗಿಸಬೇಕೆಂದು ದ್ವೇಷಸಾಧಿಸಲಾರಂಭಿಸಿದರು. ಇದನ್ನರಿತ ಮಠದ ಅಗಸನೊಬ್ಬ ಈ ವಿಷಯವನ್ನು ಶ್ರೀ ರಾಮಾನುಜರಿಗೆ ಅರುಹಿದ. ಧನುರ್ದಾಸನ

ಸದ್ಗುಣಗಳನ್ನು ಮಿಕ್ಕ ಶಿಷ್ಯರಿಗೆ ಮನವರಿಕೆ ಮಾಡಲು ರಾಮಾನುಜರು ಒಂದು ಉಪಾಯ ಮಾಡಿದರು.

ಆ ಅಗಸನನ್ನು ಕರೆದು, ಯಾರಿಗೂ ತಿಳಿಯದಂತೆ ಮಿಕ್ಕ ಶಿಷ್ಯರುಗಳ ಒಗೆದ ಬಟ್ಟೆಗಳನ್ನು ಹರಿದು ತಂದಿಡುವಂತೆ ಆಜ್ಞೆಮಾಡಿದರು. ಮಾರನೆಯ ದಿನ ಸ್ನಾನಾನಂತರ ಈ ಹರಿದ ಬಟ್ಟೆಗಳನ್ನು ಕಂಡು ಹರಿದವರಾರೆಂದು. ಅವರವರಲ್ಲೇ ಜಗಳವಾಡಲು ಪ್ರಾರಂಭಿಸಿದರು. ಕಡೆಗೆ ಶ್ರೀ ರಾಮಾನುಜರು ಅವರಿಗೆ ಸಮಾಧಾನ ಮಾಡಿ ಬೇರೆ ವಸ್ತ್ರಗಳನ್ನು ನೀಡಿದರು, ಧನುರ್ದಾಸ ನಾದರೋ ಇದಾವ ಪರಿವೆಯೂ ಇಲ್ಲದೆ ರಾಮಾನುಜರಿಗೆ ಸೇವೆ ಮಾಡುತ್ತಿದ್ದ.

"ಅಂದು ರಾತ್ರಿ ಧನುರ್ದಾಸನು ಮನೆಯಲ್ಲಿಲ್ಲದ ಸಮಯ ನೋಡಿ. ಅವನ ಹೆಂಡತಿಯ ಮೈಮೇಲಿದ್ದ ಒಡವೆಗಳನ್ನು ಯಾರಿಗೂ ತಿಳಿಯದಂತೆ ರಹಸ್ಯವಾಗಿ ತರುವಂತೆ ಶ್ರೀ ರಾಮಾನುಜರು ಮಿಕ್ಕ ಶಿಷ್ಯರಿಗೆ ತಿಳಿಸಿದರು. ಮನೆಯಲ್ಲಿ ಏನು ನಡೆಯಿತು? ಒಡವೆಗಳನ್ನು ಶಿಷ್ಯರು ತಂದರೇ! ಈಗ ದೃಶ್ಯದಲ್ಲಿ ಕಾಣಿರಿ.

"ಶಿಷ್ಯರು ಒಡವೆಗಳನ್ನು ರಾಮಾನುಜರಿಗೆ ತಂದೊಪ್ಪಿಸಿದರು. ನಂತರ ಧನುರ್ದಾಸನನ್ನು ಮನೆಗೆ ತೆರಳಲು ಹೇಳಿದರು. ರಾಮಾನುಜರು ಆ ಶಿಷ್ಯರನ್ನು ಪುನಃ ಕರೆದು ಧನುರ್ದಾಸನ ಹಿಂದೆಯೇ ಹೋಗಿ ಅವರ ಮನೆಯಲ್ಲಿ ಏನು ನಡೆಯುವುದೆಂದು ತಿಳಿದು ಬರಲು ಹೇಳಿದರು.

"ಧನುರ್ದಾಸನು ಮನೆಗೆ ತೆರಳಿ ಹೆಂಡತಿಯ ಮೈಮೇಲೆ ಅರ್ಧಭಾಗ ಒಡವೆಗಳಿರುವುದನ್ನು ಕಂಡು ಏನು ನಡೆಯಿತೆಂದು ವಿಚಾರಿಸಿದ. ಅದಕ್ಕೆ ಅವಳು ಮಠದ ಶಿಷ್ಯರು ಬಂದು, ನಾನು ಮಲಗಿರಲಾಗಿ ನನ್ನ ಮೈ ಮೇಲಿನ ಕೆಲವು ಒಡವೆಗಳನ್ನು ತೆಗೆದುಕೊಂಡರು. ಮತ್ತೆ ನಾನು ಮಿಕ್ಕ ಆ ಒಡವೆಗಳನ್ನು ತೆಗೆದುಕೊಳ್ಳಲೆಂದು ತಿರುಗಿದಾಗ ಹೆದರಿ ಓಡಿದರು ಎಂದಳು.

"ನಾವು ಮಠದ ಶಿಷ್ಯರು ನಮ್ಮಲ್ಲಿನ ವಸ್ತುಗಳು ಮಠಕ್ಕೆ ಅರ್ಪಿತ ಹೀಗಿರಲಾಗಿ ನೀನು ಒಡವೆ ಕೊಡುವುದೆಂದರೇನು? ಎಲ್ಲವೂ ಗುರುಗಳಿಗೇ ಸೇರಿದ್ದು ಎಂದು ಹೇಳಿ, ಗುರುಗಳ ಕ್ಷಮೆಕೇಳಲು ಮಠಕ್ಕೆ ಹೆಂಡತಿಯನ್ನು ಕರೆಯ್ದೊವರು. ಧನುರ್ದಾಸನ ಈ ಹಿರಿಯ ಗುಣವನ್ನು ಕಂಡು ಶಿಷ್ಯರು ತಮ್ಮ ಮೂರ್ಖತನಕ್ಕೆ ನಾಚಿ ನೀರಾದರು.

ಶ್ರೀ

## "ಶ್ರೀ ರಂಗನಾಥನ ಪ್ರಸಾದ ಮಣ್ಣಾದರೂ ಭೋಗ್ಯವೇ"

"ಪುಟ್ಟ ಪುಟ್ಟ ಬಾಲಿಕೆಯರು ದೇವರ ಆಟವನ್ನಾಡಲು, ಕಾಡಿನಲ್ಲಿರುವ

ಸೊಪ್ಪುಸದೆ, ಕಾಡಿನ ಹೂಗಳು, ದೇವರ ಗೊಂಬೆ, ಪ್ರಸಾದಕ್ಕೆ ತೆಂಗಿನ ಕರಟದಲ್ಲಿ ಮರಳು ಮಣ್ಣನ್ನು ಇಟ್ಟುಕೊಂಡು ಆಟವಾಡುತ್ತಿರುವರು. ಗೀತ, ನೃತ್ಯಗಳ ಸಂಯೋಜನೆಯಿಂದ ಪೂಜೆಯನ್ನು ಬಹಳ ಭಕ್ತಿಯಿಂದ ಆಚರಿಸುತ್ತಿರುವರು. ಇದನ್ನೆಲ್ಲಾ ದೂರದಿಂದಲೇ ಶ್ರೀ ರಾಮಾ ನುಜರು ಅವರ ಶಿಷ್ಯರು ಗಮನಿಸುತ್ತಿದ್ದರು. ಪೂಜೆ ಮುಗಿಯುವ ವೇಳೆ ರಾಮಾನುಜರನ್ನು ಕಂಡು, ತೀರ್ಥ ಪ್ರಸಾದಗಳನ್ನು ಸ್ವೀಕರಿಸುವಂತೆ ಬೇಡಿದರು. ಸಕ್ಕರೆ ಪೊಂಗಲ್ ಎಂದು ಆ ಮಣ್ಣನ್ನೇ ನೀಡುವರು. ಶ್ರೀ ರಾಮಾನುಜರೋ ಪರಮ ಭಕ್ತಿಯಿಂದ ಅದನ್ನೇ ಪ್ರಸಾದವಾಗಿ ಸ್ವೀಕರಿಸುವರು ಶಿಷ್ಯರು ತಡೆದಾಗ, ಆ ಮಕ್ಕಳ ಮುಗ್ಧ, ನಿಸ್ವಾರ್ಥಭಕ್ತಿಯ ಮುಂದೆ ಮಣ್ಣೇ ಆದರೂ ಅದು ಸಕ್ಕರೈಪೊಂಗಲಿನಷ್ಟೇ ಶ್ರೇಷ್ಠವೆಂದರು. ಅವರ ಸರಳತೆ, ಔದಾರ್ಯಕ್ಕೆ ಬೇರೆ ಸಾಕ್ಷಿ ಬೇಕಾಗಿದೆಯೇ?

ಹಿರಿಯರಾಗಲೀ ಕಿರಿಯರಾಗಲೀ, ಬಡವನಾಗಲೀ ಬಲ್ಲಿದನಾಗಲೀ, ಯಾವ ವ್ಯತ್ಯಾಸವನ್ನೂ ಕಾಣದೆ ಪರಂಧಾಮನನ್ನು ಪೂಜಿಸುವ ಭಕ್ತರ ಗುಣವೇ ಶ್ರೇಷ್ಠ ಎಂಬುದು ತಿಳಿಯುತ್ತದೆ.

ಶ್ರೀ

## "ಪಟ್ಟಿನ ಪ್ಪೆರುಮಾಳ್ ಮತ್ತು ಪಾಶುರಗಳು"

"ಶ್ರೀರಂಗ ನಗರದಲ್ಲಿ ಪಟ್ಟಿನ ಪ್ಪೆರುಮಾಳ್ ಎಂಬ ಬ್ರಾಹ್ಮಣಜಾತಿಯವರಲ್ಲದ ವ್ಯಕ್ತಿಯೊಬ್ಬರು ವಾಸಿಸುತ್ತಿದ್ದರು. ಅವರು ಪರಮಾತ್ಮನ ಮಹಾ ಭಕ್ತರಾಗಿದ್ದಕಾರಣ ಸರ್ವದಾ ದಿವ್ಯ ಪ್ರಬಂಧವನ್ನು ಕಾವೇರೀ ನದಿಯ ತೀರದಲ್ಲಿ ಕುಳಿತು ಗಾನ ಮಾಡುತ್ತಿದ್ದರು. ಬ್ರಾಹ್ಮಣರಲ್ಲದವರಾದ್ದರಿಂದ ದೇವಸ್ಥಾನದೊಳಗೆ ಇವರಿಗೆ ಪ್ರವೇಶವಿರಲಿಲ್ಲ.

ಪ್ರತಿದಿನವೂ ಕಾವೇರಿ ಸ್ನಾನಕ್ಕೆ ಹೋಗಿ ಮಿಂದು ಬರುವಾಗಲೆಲ್ಲಾ ಶ್ರೀ ರಾಮಾನುಜರು ಇವರ ಗಾನ ಕೇಳಿ ಆನಂದಿಸುತ್ತಿದ್ದರು.

ರಾಮಾನುಜರು ಸ್ನಾನಕ್ಕೆ ಹೋಗುವಾಗ ತಂಗಿಯ ಮಗ ದಾಶರಥಿಯ ಭುಜದ ಮೇಲೆ ಕೈಯಿಟ್ಟು ಹೋಗುತ್ತಿದ್ದರು. ಸ್ನಾನಮುಗಿಸಿ ಹಿಂದಿರುಗಿ ಬರುವಾಗ ಬ್ರಾಹ್ಮಣನಲ್ಲದ ಧನುರ್ದಾಸನ ಭುಜದ ಮೇಲೆ ಕೈಊರಿ ಬರುತ್ತಿದ್ದರು. ಇದರಿಂದ ರಾಮಾನುಜರಿಗೆ ಯಾವ ಜಾತಿ ಭೇದಭಾವವಿಲ್ಲವೆಂಬ ಗುಣತೋರಿಸುತ್ತದೆ. ಒಂದು ದಿನ ತಿರುವಾಯ್ಮೊಳಿಯ ಗಾನಸುಧೆಯನ್ನು ಅನುಭವಿಸಲು ರಾಮಾನುಜರು ಪಟ್ಟಿನತ್ತಾರರ ಬಳಿ ಬಂದು ಅವರ ಗಾನಕೇಳಿ ಬಹು ಆನಂದಿಸಿದರು.

1) ಒರುನಾಯಕಮಾಯೋಡ ಉಲಹುಡನಾಂಡವರ್
ಕರುನಾಯ್ ಕವರ್ನ್ದಕಾಲರ್ ಶಿದೈಹಿಯಪಾನೈಯರ್
ಪೆರುನಾಡುಕಾಣ ಇಮ್ಮೈಯಿಲೇ ಪಿಚ್ಚೈತಾಂಕೊಳ್ವರ್
ತಿರುನಾರಣನ್ ತಾಳ್ ಕಾಲಂಪೆರ ಚ್ಚಿಂದಿತ್ತುಯ್ಮ್ಮಿನೋ

2) ಒನ್ರುಂತೇವುಂ ಉಲಹುಂ ಉಯಿರುಂ ಮಟ್ರುಂಯಾದುಮಿಲ್ಲಾ
ಅನ್ರ್ ನಾನ್ಮುಹನ್ ತನ್ನೋಡು ತೇವರುಲಹೋಡು ಉಯಿರ್‌ಪಡೈತ್ತಾನ್
ಕುನ್ರಂಪೋಲ್ ಮಣಿಮಾಡ ನೀಡು ತಿರುಕ್ಕುರುಹೂರ್ ಅದನುಳ್
ನಿನ್ರಾದಿಪಿರಾನ್ ನಿರ್ಕ ಮಟ್ರೈದ್ಯೆವಂ ನಾಡುದೀರೇ.

ಒಂದು ಕಾಲದಲ್ಲಿ ಚಕ್ರಾಧಿಪತಿಯಾಗಿದ್ದ ಒಬ್ಬ ರಾಜ ಶತ್ರುಗಳ ಬಾಧೆಯಿಂದ ಸೋತು ಅವಮಾನದಿಂದ ರಾತ್ರಿಯಲ್ಲಿ ತಲೆಗೆ ಮುಸುಕು ಹಾಕಿಕೊಂಡು ಒಂದು ಒಡೆದ ಮಡಕೆಯಲ್ಲಿ ಆಹಾರವನ್ನಿಟ್ಟುಕೊಂಡು ಬರಲಾಗಿ, ದಾರಿಯಲ್ಲಿ ಆಗ ತಾನೇ ಮರಿಹಾಕಿದ ನಾಯಿಯನ್ನು ತುಳಿದಾಗ ಅದು ಕಚ್ಚಲು ಬಂದು ಆ ಇದ್ದ ಆಹಾರವೂ ಮಣ್ಣುಪಾಲಾಯಿತು. ಆದ್ದರಿಂದ ಯಾವ ಐಶ್ವರ್ಯವೂ ಶಾಶ್ವತವಲ್ಲ. ಆ ಪರಮಾತ್ಮ ತಿರುನಾರಾಯಣನ ಪಾದಗಳನ್ನು ಧ್ಯಾನಿಸಿ ಎನ್ನುವರು ನಮ್ಮಾಳ್ವಾರರು.

ಒನ್ರುಂತೇವು ಎಂಬ ಪಾಶುರ:- ಪ್ರಳಯ ಕಾಲದಲ್ಲಿ ಸಕಲ ಜೀವರಾಶಿಗಳೂ ಮುಳುಗಿಹೋಗಿದ್ದಾಗ, ಬ್ರಹ್ಮನನ್ನೂ, ದೇವತೆಗಳನ್ನೂ, ಸಕಲ ಜೀವರಾಶಿಗಳನ್ನೂ, ಪುನಃ ಸೃಷ್ಟಿಸಿದ ಆದಿಪಿರಾನ್ ಎಂಪೆರುಮಾನನೇ, ತಿರುಕ್ಕುರುಹೂರ್ ನಗರದಲ್ಲಿ ಎಲ್ಲದಕ್ಕೂ ಸಾಕ್ಷಿಯಾಗಿ ನಿಂತು ನಮಗೆ ದರ್ಶನ ಕೊಡುತ್ತಿರಬೇಕಾದರೆ ಇತರ ದೇವತೆಗಳ ಮೊರೆ ಹೋಗಲು ಸಾಧ್ಯವೇ? ಎನ್ನುವರು ಶ್ರೀ ನಮ್ಮಾಳ್ವಾರರು.

"ಶ್ರೀ ತಿರುಕ್ಕೋಷ್ಟಿಯೂರರೂ – ತಿರುಮಂತ್ರೋಪದೇಶವೂ"

"ಶ್ರೀ ಯಮುನಾಚಾರ್ಯರೆಂಬ ಆಳವಂದಾರರು ಅವರ ಅಂತಿಮ ಕಾಲದಲ್ಲಿ, ತಮ್ಮ ಮುಖ್ಯ ಶಿಷ್ಯರುಗಳಾದ 5 ಜನರಿಗೆ ಕೆಲವು ಸಲಹೆಗಳನ್ನು ನೀಡಿದ್ದರು. ರಾಮಾನುಜರು ಬರುವರು. ಆಗ ಅವರಿಗೆ ಈ ಗ್ರಂಥಗಳನ್ನು ತಲುಪಿಸಬೇಕೆಂದು ತಿಳಿಸಿದ್ದರು.

1) ಶ್ರೀ ಮಹಾಪೂರ್ಣರಲ್ಲಿ – ದಿವ್ಯ ಪ್ರಬಂಧವನ್ನೂ

2) ಶ್ರೀಶೈಲ ಪೂರ್ಣರಲ್ಲಿ – ಶ್ರೀ ಮದ್ರಾಮಾಯಣವನ್ನೂ

3) ಮಾಲಾಧಾರರಲ್ಲಿ – ತಿರುವಾಯ್ಮೊಳಿ ಗ್ರಂಥವನ್ನೂ

4) ವರ ರಂಗರಲ್ಲಿ – ಆಚಾರ್ಯನಿಷ್ಠೆ,

5) ತಿರುಕ್ಕೋಷ್ಟಿಪೂರ್ಣರಲ್ಲಿ ರಹಸ್ಯ ಮಂತ್ರದ ಅರ್ಥ.

ಇವೆಲ್ಲವನ್ನು ಶ್ರೀ ರಾಮಾನುಜರು ಕಲಿತು ಕರಗತ ಮಾಡಿಕೊಂಡರು. ಕಡೆಯಲ್ಲಿ ತಿರುಕ್ಕೋಷ್ಟಿಯೂರರ ಬಳಿ ರಹಸ್ಯ ಮಂತ್ರಗಳನ್ನು ಕಲಿಯಲು 17 ಸಲ

ಕಾಲುನಡಿಗೆಯಲ್ಲೇ ಬಂದರು. ಅಷ್ಟು ಸಲವೂ ತಿರುಕ್ಕೋಟಿಯೂರರು ನಿರಾಕರಿಸಿದರು. ಕೊನೆಗೆ 18ನೆಯ ಸಲಿ ಇವರ ಶ್ರದ್ಧಾ ಭಕ್ತಿಯನ್ನು ಕಂಡು ಮನಕರಗಿ ರಹಸ್ಯ ಮಂತ್ರೋಪದೇಶಕ್ಕೆ ಒಪ್ಪಿಕೊಂಡರು. ಇದರೊಂದಿಗೆ ಈ ಮಂತ್ರ ಬಹುರಹಸ್ಯವೆಂದೂ ಮೋಕ್ಷಕ್ಕೆ ಹೋಗುವ ಮಾರ್ಗವಿದೇ ಎಂದೂ ಇದನ್ನೇನಾದರೂ ಇತರರಿಗೆ ತಿಳಿಸಿದರೆ ನರಕಕ್ಕೆ ಹೋಗಬೇಕಾದೀತೆಂದು ನಿಬಂಧನೆ ಹಾಕಿ ಉಪದೇಶಿಸಿದರು. ರಾಮಾನುಜರೇನೋ ಅಷ್ಟಾಕ್ಷರಿ ಮಂತ್ರವನ್ನು ಕಲಿತರು. ಶ್ರೀರಾಮಾನುಜರ ಉದಾರ ಗುಣಕ್ಕೆ ಈ ನಿಬಂಧನೆ ಸರಿಗಾಣಲಿಲ್ಲ. ಹೊರಗೆ ಬಂದು ದೇವಸ್ಥಾನದ ಗೋಪುರದ ಮೇಲೆ ನಿಂತು, ಶ್ರದ್ಧೆಯುಳ್ಳ ಎಲ್ಲಾ ಜನರನ್ನು ಕರೆದು ಈ ಮಂತ್ರವನ್ನು ಎಲ್ಲರಿಗೂ ಬಹಿರಂಗವಾಗಿ ಉಪದೇಶಿಸಿದರು. ಇವರ ಕರುಣೆ ಅಪಾರವಾದದ್ದು. ಜನರ ಘೋಷಣೆಯನ್ನು ಕೇಳುತ್ತಲೇ ತಿರುಕೋಷ್ಟಿಪೂರ್ಣರು ಕೋಪಾವಿಷ್ಟರಾಗಿ ಬಂದು ರಾಮಾನುಜರನ್ನು ದೂಷಿಸಲಾರಂಭಿಸಿದರು. ಆದರೆ ರಾಮಾನುಜರೋ ಅತಿ ಶಾಂತ ಚಿತ್ತದಿಂದ "ಸ್ವಾಮಿ. ತಮ್ಮ ಮಾತು ಮೀರಿದ್ದಕ್ಕೆ ಕ್ಷಮೆ ಕೋರುವೆ. ಆದರೆ ಈ ಮಂತ್ರದ ಮಹಿಮೆಯಿಂದ ನಾನೊಬ್ಬ ಮಾತ್ರ ಮೋಕ್ಷಕ್ಕೆ ಹೋದರೆ ಸಾಕೇ? ಈ ಎಲ್ಲ ಜನರಿಗೂ ಅದು ಸಿಗಬೇಕೆಂದು ಈ ಮಂತ್ರವನ್ನು ಉಪದೇಶಿಸಿದೆ. ನಾನೊಬ್ಬ ನರಕ ಅನುಭವಿಸಿದರೂ ಪರವಾಗಿಲ್ಲ. ಮಿಕ್ಕೆಲ್ಲರಿಗೂ ಮೋಕ್ಷಸಿಗುವುದಲ್ಲ" ಎಂದರು. ತಿರುಕೋಷ್ಟಿಯವರಿಗೆ ಶ್ರೀ ರಾಮಾನುಜರ ಉದಾರ ಗುಣ, ವಿಶಾಲ ಹೃದಯದ ಅನುಭವವಾಯಿತು. ಕಣ್ಣೀರು ಧಾರೆ ಧಾರೆಯಾಗಿ ಹರಿಯಿತು. ಎಂಬೆರುಮಾನಾರರೇ ಎಂಬೆರುಮಾನಾರರೇ ಎಂದು ಅವರನ್ನು ಅಪ್ಪಿಕೊಂಡರು ಇಂತಹ ಉದಾತ್ತ ಗುಣ ನಮ್ಮ ರಾಮಾನುಜರದು.

"ತೊಂಡನೂರು ಕೆರೆ ನಿರ್ಮಾಣ"

ಬನ್ನಿ, ತಮಿಳು ನಾಡಿನಿಂದ ಈಗ ಕರ್ನಾಟಕಕ್ಕೆ ಪ್ರಯಾಣ ಬೆಳೆಸೋಣ. ತೊಂಡನೂರ್ ಕೆರೆಯನ್ನು ನಿರ್ಮಿಸಿದವರು ಯಾರು? ನಮ್ಮ ರಾಮಾನುಜರೇ. ಅಂದೇ ನೀರಿನ ಸೆಲೆಯಿಲ್ಲದೆ ವ್ಯವಸಾಯಿಗಳ ಕಷ್ಟ ತಾಳಲಾರದೆ ತೊಂಡನೂರು ಕೆರೆ ಕಟ್ಟಿಸಿದರು. "ಕೈ ಕೆಸರಾದರೆ ಬಾಯಿ ಮೊಸರು" ಎಂಬ ನಾಣ್ನುಡಿಯಂತೆ, ನೀರಿಲ್ಲದ ಜೀವನ ವ್ಯರ್ಥ ಎಂದು ಮಳೆ ನೀರನ್ನು ಶೇಖರಿಸಿಡಲು ದಾರಿ ತೋರಿದರು (Rain Harvesting) ಕೆರೆ, ಕೊಳ, ಬಾವಿ, ಕುಂಟೆ, ಮುಂತಾದ ಜಲನಿಧಿಗಳನ್ನು, ಅಂದೇ ಏರ್ಪಡಿಸಿ ರೈತರಿಗೆ ಅನುಕೂಲ ಮಾಡಿಕೊಟ್ಟರು. ಅದರ ಸುತ್ತ ಮುತ್ತಲಿನ ಊರುಗಳಿಗೂ ನೀರಿನ ತೊಂದರೆ ತಪ್ಪಿತು.

ಶ್ರೀ ನಾಥಮುನಿಗಳ ಅವತಾರ ಸ್ಥಳವಾದ ಕಾಟ್ಟುಮನ್ನಾರ್ ಕೋಯಿಲ್

ಎಂಬ ದಿವ್ಯ ದೇಶದಲ್ಲಿ ಒಂದು ದೊಡ್ಡ ಕೆರೆ ವೀರಾಣಏರಿ ನಿರ್ಮಾಣವಾಗಿದ್ದಿತು. ಅದಕ್ಕೆ 74 ನಾಲೆಗಳು ಅಂದರೆ ಕಾಲುವೆಗಳ ಮೂಲಕ ಸುತ್ತ ಮುತ್ತ ಎಲ್ಲ ಕಡೆಗೆ ನೀರು ಸರಬರಾಜಾಗುತ್ತಿತ್ತು. ಇದನ್ನು ಈಗಲೂ ಕಾಣಬಹುದು. ಇದನ್ನು ಕಂಡ ರಾಮಾನುಜರಿಗೆ ಒಂದು ಯೋಚನೆ ಹೊಳೆಯಿತು. ಈ ಕಾಲುವೆಗಳಂತೆಯೇ 74 ಸಿಂಹಾಸನಾಧಿಪತಿಗಳನ್ನು ನಿಯಮಿಸಿ ಶ್ರೀ ವೈಷ್ಣವ ಮತವನ್ನು ಲೋಕಕ್ಕೆಲ್ಲಾ ಪ್ರಚಾರಮಾಡ ಬಹುದೆಂದು ಯೋಚಿಸಿ 74 ಸಿಂಹಾಸನಾಧಿಪತಿಗಳನ್ನು ನಿಯಮಿಸಿ ದೇವಸ್ಥಾನದ ವಿಧಿವಿಧಾನಗಳನ್ನು ಸಮರ್ಪಕವಾಗಿ ಮಾಡಿದರು. ಬ್ರಹ್ಮರಾಕ್ಷಸನಿಂದ ಪೀಡಿತಳಾಗಿದ್ದ ಜೈನ ಮಹಾರಾಜ ಬಿಟ್ಟಿದೇವನ ಕುಮಾರಿಯ ತೊಂದರೆಯನ್ನು ತಪ್ಪಿಸಿದರು. ಆತನು ವಿಷ್ಣುವರ್ಧನ ಎಂಬ ಹೆಸರಿನಿಂದ ಶ್ರೀವೈಷ್ಣವ ಮತಕ್ಕೆ ಸೇರಿದನು ಅವನ ಸಹಾಯದಿಂದ ತೊಂಡನೂರು ಕೆರೆ ನಿರ್ಮಾಣ ಮತ್ತು ಮೇಲುಕೋಟೆಯ ತಿರುನಾರಾಯಣನ ದೇವಸ್ಥಾನ ನಿರ್ಮಾಣವಾಯಿತು. ಶ್ರೀ ರಾಮಾನುಜರು ಲೋಕೋಪಕಾರಕ್ಕಾಗಿ ನಿಸ್ವಾರ್ಥ ಸೇವೆಮಾಡಿದರು.

ಶ್ರೀ

## "ಬೀಬೀ ನಾಚ್ಚಿಯಾರ್"

ಒಬ್ಬ ಮುಸಲ್ಮಾನ ಹುಡುಗಿಯನ್ನು ನಾಚ್ಚಿಯಾರಾಗಿ ಪರಿವರ್ತಿಸಿದವರು ಯಾರು? ರಾಮಾನುಜರೇ. ಹೇಗೆಂದು ಈಗ ತಿಳಿಯೋಣ.

ಮೇಲುಕೋಟೆಯ ದೇವಸ್ಥಾನಕ್ಕೆ ಉತ್ಸವ ಮೂರ್ತಿಯ ಅವಶ್ಯಕತೆಯಿದ್ದಿತು. ಅದು ದೆಹಲಿ ಬಾದಷಹನ ಆಸ್ಥಾನದಲ್ಲಿರುವುದೆಂದು ಆ ಪರಮಾತ್ಮನೇ ಇವರಿಗೆ ಕನಸಿನಲ್ಲಿ ತೋರಿ ತಿಳಿಸಿದ. ಕಾಲ್ನಡಿಗೆಯಿಂದಲೇ ಆ ವಿಗ್ರಹವನ್ನು ಹುಡುಕುತ್ತಾ ದೆಹಲಿಗೆ ಆಗಮಿಸಿದರು ರಾಮಾನುಜರು.

ಅದಾವ ವಿಗ್ರಹವೋ ತನಗೆ ತಿಳಿಯದೆಂದು, ಆ ಕೋಣೆಯಲ್ಲಿ ಅನೇಕಾನೇಕ ವಿಗ್ರಹಗಳಿವೆ. ತಮಗೆ ಬೇಕಾದ ವಿಗ್ರಹವನ್ನು ನೀವೇ ಆರಿಸಿಕೊಳ್ಳಿ ಎಂದ ಆ ಬಾದಷಹ.

ರಾಮಾನುಜರು ಆ ಪರಮಾತ್ಮನನ್ನು ಭಕ್ತಿಯಿಂದ ಧ್ಯಾನಿಸಿ ಕರೆದರು, ಶೆಲ್ವಪ್ಪಿಳ್ಳೆಯೇ ಬಾರಾ ಬಾರಾ ಎಂದು ಕರೆದಾಗ, ಇವರ ಕರೆಗೆ ಓಗೊಟ್ಟು ಬಾಲಕೃಷ್ಣನಾಗಿ, ಕಾಲಲ್ಲಿ ಗೆಜ್ಜೆಕಟ್ಟಿ ಘಲೀರ್ ಘಲೀರೆಂದು ಸರ್ವ ಲಕ್ಷಣ ಸಂಪನ್ನನಾಗಿ ಓಡಿ ಬಂದು ಇವರ ತೊಡೆಯ ಮೇಲೇರಿ ಕೂತ. ಬಾದಷಹನಿಗೆ ಆಶ್ಚರ್ಯವೋ ಆಶ್ಚರ್ಯ. ಸಕಲೈಶ್ವರ್ಯಗಳೊಡನೆ ರಾಮಾನುಜರನ್ನು ಮರ್‍ಯಾದೆಯಿಂದ ಬೀಳ್ಕೊಟ್ಟ. ಆ ವಿಗ್ರಹವನ್ನೆತ್ತಿಕೊಂಡು ಬರುತ್ತಿರಲಾಗಿ ದಾರಿಯಲ್ಲಿ

ಕಳ್ಳರ ಗುಂಪೊಂದು ಇವರನ್ನು ಅಡ್ಡಗಟ್ಟಿ ಹಣ ದೋಚಲು ಪ್ರಯತ್ನಿಸುತ್ತಿದ್ದರು. ಅದೇನಾಶ್ಚರ್ಯ! ಆಗ ಅದೆಲ್ಲಿಂದಲೋ ಬಂದ ತಿರುಕ್ಕುಲತ್ತಾರ್, ಕಳ್ಳರನ್ನು ಹೊಡೆದೋಡಿಸಿ ಇವರನ್ನು ಕಾಪಾಡಿದರು. ರಾಮಾನುಜರು ಇದರಿಂದ ಪ್ರಸನ್ನರಾಗಿ ಅವರುಗಳಿಗೆ ಮರ್ಯಾದೆ ಕೊಟ್ಟು ಆಲಯ ಪ್ರವೇಶಕ್ಕೆ ಮತ್ತು ರಥ ಎಳೆಯುವುದಕ್ಕೆ ಅನುಮತಿಯಿತ್ತರು.

"ಇತ್ತ ಬಾದಷಹನ ರಾಜಕುಮಾರಿ ಹಿಂದಿರುಗಿ ಬಂದು, ತನ್ನ ದೇವರ ವಿಗ್ರಹ ಕಾಣದೆ ಕಂಗಾಲಾಗಿ, ರಾಮಾನುಜರನ್ನು ಕುದುರೆಯ ಮೇಲೇರಿ ಹಿಂಬಾಲಿಸಿ ಬಂದಳು. ಆ ಪರಮಾತ್ಮನನ್ನು ದರ್ಶಿಸಿ ಅಲ್ಲೇ ಐಕ್ಯಳಾದಳು. ಆ ಪರಮಾತ್ಮನನ್ನೇ ಪತಿಯಾಗಿ ಭಾವಿಸಿದ ಆಕೆಯನ್ನು ಬೀಬೀ ನಾಚ್ಚಿಯಾರ್ ಎಂದು ಹೆಸರಿಟ್ಟು ಪರಮಾತ್ಮನ ಪಾದವಡಿಯಲ್ಲೇ ಪ್ರತಿಷ್ಠಾಪನೆ ಮಾಡಿದರು. ಆಂಡಾಳ್ ದೇವಿಯಂತೆಯೇ ಬೀಬೀಯೂ ಕೃಷ್ಣನನ್ನೇ ಪತಿಯಾಗಿ ನೆನೆದವಳು. ರಾಮಾನುಜರು ಇವಳ ಕುಲ ಗೋತ್ರವನ್ನು ನೋಡದೆ ಅವಳ ಪರಮಾತ್ಮನ ಮೇಲಿನ ಭಕ್ತಿಯನ್ನು ಕಂಡು ಗೌರವಿಸಿದರು

# The Kalā Premi Foundation

# ಕಲಾ ಪ್ರೇಮಿ ಫೌಂಡೇಷನ್





**A Registered Charitable Trust devoted to promoting greater awareness and appreciation of art & culture**


Established in 2008, The Kala Premi Foundation has presented over 60 programs till date, which have neen acclaimed as umique by art lovers, artists, critics and the media.

Donations to The Kala Premi Foundation are exempted from Incime Tax under Section 80G (5) (vi) of the Income Tax Act.

ಕಲಾ ಪ್ರೇಮಿ ಫೌಂಡೇಷನ್ The Kalā Premi Foundation

213, 1st flr, 4th Main, 18th Cross, Malleswaram, Bangalore—560 005

Tel: 2334 2404 email: kalapremi.foundation@gmail.com



ಕಳೆದ ವರ್ಷ ನಮ್ಮ ಎರಡು ಸಂಸ್ಥೆಗಳೂ ಸೇರಿ ಅರ್ಪಿಸಿದ್ದ 'ದಿವ್ಯಪ್ರಬಂಧ ಆಳ್ವಾರುಗಳ ಅಣಿಮುತ್ತುಗಳು' ಎಂಬ ಕಾರ್ಯಕ್ರಮ ಬಹಳ ಜನಪ್ರಿಥಿವಾದಾಗ, ನಮಗೆ ಇದೇರೀತಿ ಮತ್ತೊಂದು ಕಾರ್ಯಕ್ರಮವನ್ನು ಅರ್ಪಿಸಬೇಕು ಎಂದು ತೋರಿತು. ಅದುಯಾವ ವಿಷಯದ ಮೇಲೆ ಇರಬಹುದು ಎಂದು ಯೋಚಿಸುತ್ತಿದ್ದಾಗ ನಮಗೆ ತೋಚಿದ್ದು ರಾಮಾನುಜ ಆಚಾರ್ಯರ ಸಮಾಜ ಸುಧಾರಕ ಪಾತ್ರದಬಗ್ಗೆ. ಅವರ ಜೀವನದ ಉದ್ದಕ್ಕೂ ಅವರ ಸಾಮಾಜಿಕ ಕಾಳಜಿ ಮತ್ತು ಅವರಿಗೆ ಇತರರಬಗ್ಗೆ ಇದ್ದ ಕಳಿಕಳಿಯು ಎದ್ದು ತೋರುತ್ತದೆ. ಅವರ ಜೀವನದ ಕೆಲವು ಘಟನೆಗಳ ಮೂಲಕ ಪ್ರೇಕ್ಷಕರಿಗೆ ಅವರಿಗಿದ್ದ ಸಾಮಾಜಿಕ ಕಳಿಕಳಿ ಮತ್ತು ಜಾತಿ, ಕುಲ, ಲಿಂಗ ಭೇದಗಳಿಲ್ಲದೆ ಮನುಷ್ಯಜಾತಿಯ ಎಲ್ಲರ ಬಗ್ಗೆಯೂ ಇದ್ದ ಕಾಳಜಿ ಮತ್ತು ಅನುಕಂಪವನ್ನು ತೋರಿಸಬೇಕು ಎಂದು ಕೊಂಡೆವು. ರಾಮಾನುಜಾಚಾರ್ಯರು ಇದ್ದದ್ದು ಇಂದಿಗೆ ಒಂದು ಸಾವಿರ ವರ್ಷಗಳಿಗೆ ಹಿಂದೆ. ಆಗಿನ ಸಮಾಜದಲ್ಲಿ ಜಾತೀಯತೆ, ಮೇಲು ಕೀಳು ಇತ್ಯಾದಿ ಭಾವನೆಗಳಿಗೆ ಹೆಚ್ಚು ಪ್ರಾಧಾನ್ಯವಿದ್ದಿತು. ಈ ರೀತಿಯ ಹಿನ್ನೆಲೆಯಲ್ಲಿ ಅವರು ಸಕಲರೂ ಮೋಕ್ಷ ಮತ್ತು ಭಗವತ್ಪ್ರಾಪ್ತಿಗೆ ಅರ್ಹರು ಎಂದು ದೃಢವಾಗಿ ನಂಬಿದ್ದರು. ಅವರು 'ಅಸ್ಪರ್ಶರು' ಎಂಬವರನ್ನು 'ತಿರುಕುಲತ್ತಾರ್'ಅಂದರೆ ಶ್ರೇಷ್ಠಕುಲದವರು ಎಂದು ಕರೆದರು ಮತ್ತು ಅವರಿಗೆ ವಿಶೇಷ ದಿನಗಳಲ್ಲಿ ದೇವಸ್ಥಾನಕ್ಕೆಬಂದು ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿದರು. ಈ ಮಹಾನ್ ಸಮಾಜ ಸುಧಾರಕರಿಗೆ ಈ ಕಾರ್ಯಕ್ರಮದ ಮೂಲಕ ನಮ್ಮೆಲ್ಲರ ನಮನಗಳು.

